



**ಚಟುವಟಿಕೆ 16: ಅಡುಗೆ ಮನೆಯ ತ್ಯಾಜ್ಯ ವಸ್ತುಗಳಿಂದ ಮರಗಳನ್ನು ಪುನರ್ ರಚಿಸುವುದು**

**ವಯಸ್ಸು:** 5 ವರ್ಷಕ್ಕಿಂತ ಮೇಲ್ಪಟ್ಟವರು.

**ಅಗತ್ಯ ವಸ್ತುಗಳು:** ಅಡುಗೆ ಮನೆಯ ತ್ಯಾಜ್ಯ ವಸ್ತುಗಳು ಈರುಳ್ಳಿಯ ಸಿಪ್ಪೆ, ಬೆಳ್ಳುಳ್ಳಿಯ ಸಿಪ್ಪೆ, ಸೌತೆಕಾಯಿಯ ಸಿಪ್ಪೆ, ಎಲೆಕೋಸು ಅಥವಾ ಹೂ ಕೋಸಿನ ತ್ಯಾಜ್ಯ, ತರಕಾರಿಯ ಎಲೆಗಳು, ಇತ್ಯಾದಿ.

**ಹಂತಗಳು:**

1. ನಿಮ್ಮ ಅಡುಗೆ ಮನೆಯಲ್ಲಿ ಸಿಗುವ 5 ವಿವಿಧ ರೀತಿಯ ಬಣ್ಣಗಳ ತ್ಯಾಜ್ಯ ವಸ್ತುಗಳನ್ನು ಹುಡುಕಿ ಅಥವಾ ನಿಮ್ಮ ಮನೆಯಲ್ಲಿರುವ ದೊಡ್ಡವರಿಗೆ ಇವುಗಳನ್ನು ಇರಿಸಲು ಅಥವಾ ತಂದುಕೊಡಲು ಹೇಳಿ.

2. ನಿಮ್ಮ ಸುತ್ತ ಮುತ್ತ ನೀವು ನೋಡಿರುವ ವಿವಿಧ ರೀತಿಯ ಮರಗಳ ಬಗ್ಗೆ ಯೋಚಿಸಿ. ಆ ಮರಗಳಿಗೆ ಎಲೆಗಳು, ಹೂ ಗಳು ಮತ್ತು ಹಣ್ಣುಗಳಿವೆಯೇ? ಎಲ್ಲಾ ಮರಗಳು ಒಂದೇ ರೀತಿಯ ಬಣ್ಣಗಳಿಂದ ಕೂಡಿದೆಯೇ? ಒಂದೇ ರೀತಿಯ ಆಕಾರಗಳು ಹಾಗೂ ಗಾತ್ರ ಗಳಿಂದ ಕೂಡಿದೆಯೇ ಎಂದು ಯೋಚಿಸಿ?

3. ನೀವು ಪುನರ್ ರಚಿಸಲು ಬಯಸುವ ಒಂದು ಮರವನ್ನು ಆರಿಸಿ ಅದು ವಾಸ್ತವವಾಗಿರಬಹುದು ಅಥವಾ ನಿಮ್ಮ ಕಲ್ಪನೆಯಿಂದ ಕೂಡಿರಬಹುದು.

4. ಅಡುಗೆ ಮನೆಯ ತ್ಯಾಜ್ಯವನ್ನು ಬಳಸಿ, ನಿಮ್ಮ ಟೇಬಲ್ ಅಥವಾ ನೆಲದ ಮೇಲೆ ಬೇರುಗಳು, ಕಾಂಡ, ಕೊಂಬೆಗಳು, ಎಲೆಗಳು, ಹೂವುಗಳು ಇತ್ಯಾದಿಗಳ ವಿವರಗಳೊಂದಿಗೆ ಮರಗಳನ್ನು ರಚಿಸಿ.

*ನಮ್ಮ ಚಟುವಟಿಕೆಗಳು ನಿಮಗೆ ಆಕರ್ಷಕ ಮತ್ತು ಆಸಕ್ತಿದಾಯಕ ಎಂದು ನಿಮಗೆ ಅನಿಸಿದರೆ ನಿಮ್ಮ ಅನುಭವಗಳನ್ನು ಫೇಸ್ ಬುಕ್ ಮತ್ತು ಇಸ್ಟಾಗ್ರಾಮ್ ನಲ್ಲಿ ಹಂಚಿಕೊಳ್ಳಬಹುದು @artsparksfoundation ಎಂದು ಟ್ಯಾಗ್ ಮಾಡಿ. ನಮ್ಮ ಇತರೆ ಚಟುವಟಿಕೆಗಳ ಮಾಹಿತಿಗಳಿಗಾಗಿನೀವು ನಮ್ಮನ್ನು ಅನುಸರಿಸಬಹುದು. ನೀವು ಮಾಡಿದ ಚಟುವಟಿಕೆಯ ಕಲಾಕೃತಿಗಳ ಚಿತ್ರಗಳು ಮತ್ತು ಅನುಭವಗಳನ್ನು ನೀವು mtombing.artsparks@gmail.com ಗೆ ಕಳುಹಿಸಬಹುದು.*